**National**
**Kannada**
**06.07.2025 / 7.35 am**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ೧೭ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಬ್ರೆಜಿಲ್ ತಲುಪಿದ ಪ್ರಧಾನಿ ನರೇಂದ್ರ ಮೋದಿ; ಮಹತ್ವದ ಚರ್ಚೆ ನಡೆಸುವ ನಿರೀಕ್ಷೆ

೨. ಅರ್ಜೆಂಟೀನಾ ಅಧ್ಯಕ್ಷರೊಂದಿಗೆ ಪ್ರಧಾನಿ ದ್ವಿಪಕ್ಷೀಯ ಮಾತುಕತೆ; ತಂತ್ರಜ್ಞಾನ, ರಕ್ಷಣೆ ಸೇರಿದಂತೆ ವಿವಿಧ ಕ್ಷೇತ್ರಗಳ ಸಹಕಾರ ಬಲವರ್ಧನೆಗೆ ಒತ್ತು

೩. ಅಮೆರಿಕದ ಟೆಕ್ಸಾಸ್‌ನಲ್ಲಿ ಭೀಕರ ಪ್ರವಾಹ: ೩೨ ಮಂದಿ ಸಾವು, ೨೭ ಕ್ಕೂ ಹೆಚ್ಚು ಜನ ನಾಪತ್ತೆ

೪. ವಿಂಬಲ್ಡನ್ ಟೆನಿಸ್; ಪುರುಷರ ಡಬಲ್ಸ್‌ನಲ್ಲಿ ಮೂರನೇ ಸುತ್ತಿಗೇರಿದ ಭಾರತದ ಯುಕಿ ಭಾಂಬ್ರಿ ಜೋಡಿ

೫. ಬೆಂಗಳೂರಿನಲ್ಲಿ ನೀರಜ್ ಚೋಪ್ರಾ ಕ್ಲಾಸಿಕ್ ೨೦೨೫ ಸಂಪನ್ನ; ಪದಕ ಬೇಟೆ ಮುಂದುವರಿಸಿದ ನೀರಜ್ ಚೋಪ್ರಾ

<><*<><>*><>

ತಮ್ಮ ಐದು ರಾಷ್ಟ್ರಗಳ ಪ್ರವಾಸದ ನಾಲ್ಕನೇ ಚರಣದ ಭಾಗವಾಗಿ ಇಂದು ಬ್ರೆಜಿಲ್‌ನ ರಿಯೋ ಡಿ ಜನೇರಿಯೋ ನಗರಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಗಮಿಸಿದ್ದಾರೆ. ಈ ಭೇಟಿಯ ಸಂದರ್ಭದಲ್ಲಿ ಅವರು ೧೭ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಶೃಂಗಸಭೆಯಲ್ಲಿ, ವಿಶ್ವ ಆಡಳಿತ ವ್ಯವಸ್ಥೆಯ ಸುಧಾರಣೆ, ಶಾಂತಿ ಮತ್ತು ಭದ್ರತೆ, ಬಹುಪಕ್ಷೀಯತೆಯ ಬಲವರ್ಧನೆ, ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಬಳಕೆ, ಹವಾಮಾನ ಕ್ರಮಗಳು, ಜಾಗತಿಕ ಆರೋಗ್ಯ, ಆರ್ಥಿಕ ಮತ್ತು ಹಣಕಾಸು ವಿಷಯಗಳು ಸೇರಿದಂತೆ ಪ್ರಮುಖ ಜಾಗತಿಕ ವಿಷಯಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ. ಶೃಂಗ್ ಸಭೆಯ ನೇಪಥ್ಯದಲ್ಲಿ ಪ್ರಧಾನಿ ನೆರೇಂದ್ರ ಮೋದಿ ಹಲವು ರಾಷ್ಟ್ರಗಳ ನಾಯಕರೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಅವರು ಬ್ರೆಜಿಲ್ ರಾಜಧಾನಿ ಬ್ರಾಸಿಲಿಯಾ ನಗರಕ್ಕೆ ಕೂಡ ಪ್ರವಾಸ ಬೆಳೆಸಲಿದ್ದು, ಅಲ್ಲಿ ಬ್ರೆಜಿಲ್ ಅಧ್ಯಕ್ಷ ಲುಯಿಸ್ ಇನಾಸಿಯೋ ಲುಲಾ ಡಾ ಸಿಲ್ವಾ ಅವರೊಂದಿಗೆ ಭಾರತ-ಬ್ರೆಜಿಲ್ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ವಿಸ್ತರಿಸುವ

ಕುರಿತು ಸಮಗ್ರ ಚರ್ಚೆ ನಡೆಸಲಿದ್ದಾರೆ. ಈ ಸಂವಾದ ವ್ಯಾಪಾರ, ರಕ್ಷಣಾ, ಇಂಧನ, ಅಂತರಿಕ್ಷ, ತಂತ್ರಜ್ಞಾನ, ಕೃಷಿ, ಆರೋಗ್ಯ ಮತ್ತು ಜನರಿಂದ-ಜನರ ಸಂಪರ್ಕದಂತಹ ಪರಸ್ಪರ ಹಿತಾಸಕ್ತಿಯ ಕ್ಷೇತ್ರಗಳನ್ನು ಒಳಗೊಂಡಿರಲಿವೆ.

<><*<><>*><>

ಅರ್ಜೆಂಟೀನಾ ಅಧ್ಯಕ್ಷ ಹಾವಿಯರ್ ಮಿಲೆ ಅವರೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ನಿನ್ನೆ ಉತ್ಪಾದಕ ಸಭೆ ನಡೆಸಿದರು. ೫೭ ವರ್ಷಗಳ ಬಳಿಕ ಭಾರತೀಯ ಪ್ರಧಾನಮಂತ್ರಿಯೊಬ್ಬರು ಅರ್ಜೆಂಟೀನಾಗೆ ದ್ವೈಪಕ್ಷೀಯ ಭೇಟಿ ನೀಡಿದ್ದು, ಐತಿಹಾಸಿಕವಾಗಿತ್ತು. ಈ ವೇಳೆ ವ್ಯಾಪಾರ, ತಂತ್ರಜ್ಞಾನ, ರಕ್ಷಣೆ, ಬಾಹ್ಯಾಕಾಶ, ಆರೋಗ್ಯ ಮತ್ತು ಔಷಧೋದ್ಯಮ ಸೇರಿದಂತೆ ಹಲವು ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರ ವಿಸ್ತರಿಸಲು ಉಭಯ ನಾಯಕರು ಒಮ್ಮತ ವ್ಯಕ್ತಪಡಿಸಿದರು. ಭಾರತ-ಅರ್ಜೆಂಟೀನಾ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ನಿರ್ಧರಿಸಲಾಯಿತು. ಭಾರತೀಯ ಔಷಧ ಕಂಪನಿಗಳಿಗೆ ಅನುಮತಿ ಹಾಗೂ ನಿಬಂಧನೆಗಳನ್ನು ಸರಳಗೊಳಿಸಲು ಭಾರತ ಮನವಿ ಮಾಡಿದ್ದು, ಅರ್ಜೆಂಟೀನಾ ಯುಎಸ್ ಎಫ್‌ಡಿಎ ಅಥವಾ ಯುರೋಪಿಯನ್ ಇಎಂಎ ಅನುಮೋದಿತ ಔಷಧಿಗಳಿಗೆ ಆಮದು ಅನುಮತಿ ನೀಡಲು ಸಮ್ಮತಿಸಿದೆ. ಇಂಧನ ಮತ್ತು ನಿರ್ಣಾಯಕ ಖನಿಜ ಕ್ಷೇತ್ರಗಳ ಸಹಕಾರದತ್ತ ವಿಶೇಷ ಗಮನ ಹರಿಸಲಾಯಿತು. ಬಾಹ್ಯಾಕಾಶ ಕ್ಷೇತ್ರ, ಡ್ರೋನ್‌ಗಳ ಬಳಕೆ, ಕ್ರೀಡಾ ನಿರ್ವಹಣೆಯ ಕುರಿತು ಸಹ ಚರ್ಚೆಗಳು ನಡೆದವು. ಭಾರತೀಯ ಯುಪಿಐ ವ್ಯವಸ್ಥೆಯಲ್ಲಿ ಅಧ್ಯಕ್ಷ ಮಿಲೆ ಹೆಚ್ಚು ಆಸಕ್ತಿ ತೋರಿಸಿದ್ದಾರೆ. ಪಹಲ್ಗಾಮ್ ದಾಳಿ ನಂತರ ಭಾರತಕ್ಕೆ ನೀಡಿದ ಬೆಂಬಲಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅರ್ಜೆಂಟೀನಾಗೆ ಧನ್ಯವಾದ ತಿಳಿಸಿದ್ದು, ಅಧ್ಯಕ್ಷ ಮಿಲೆಯವರಿಗೆ ಭಾರತಕ್ಕೆ ಭೇಟಿ ನೀಡುವ ಆಹ್ವಾನ ನೀಡಿದರು. ಬ್ಯೂನಸ್ ಐರಸ್‌ನಿಂದ ನಿರ್ಗಮಿಸುವ ಮೊದಲು, ಪ್ರಧಾನಿ ನರೇಂದ್ರ ಮೋದಿ ಮಹಾತ್ಮಾ ಗಾಂಧೀಜಿ ಮತ್ತು ರವೀಂದ್ರನಾಥ ಟಾಗೋರ್ ಅವರ ಪುತ್ಥಳಿಗಳಿಗೆ ಪುಷ್ಪಾಂಜಲಿ ಸಲ್ಲಿಸಿದರು.

<><*<><>*><>

ದೇಶದ ಪ್ರಥಮ ಸಹಕಾರ ವಿಶ್ವವಿದ್ಯಾನಿಲಯ ನಿರ್ಮಾಣಕ್ಕೆ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ, ಗುಜರಾತ್‌ನ ಆನಂದ್ ಜಿಲ್ಲೆಯಲ್ಲಿ ನಿನ್ನೆ ಶಿಲಾನ್ಯಾಸ ನೆರವೇರಿಸಿದರು. ರಾಷ್ಟ್ರದ ಪ್ರಥಮ ಸಹಕಾರ ಸಚಿವರಾದ ಅಮಿತ್ ಶಾ ಅವರು, 'ತ್ರಿಭುವನ್' ಸಹಕಾರ ವಿಶ್ವವಿದ್ಯಾನಿಲಯದ ಭೂಮಿ ಪೂಜೆ ನೆರವೇರಿಸಿದರು. ಬಳಿಕ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸಹಕಾರದಿಂದ ಸಮೃದ್ಧಿ ಆಶಯದೊಂದಿಗೆ ಕೋಟ್ಯಾಂತರ ಬಡ, ಗ್ರಾಮೀಣ ಜನರ ಬದುಕಿನಲ್ಲಿ ಹೊಸ ಭರವಸೆ ಮತ್ತು ಆರ್ಥಿಕ ಸಮೃದ್ಧಿಗೆ ದೇಶದಲ್ಲಿ ಪ್ರಥಮ ಬಾರಿಗೆ ಸಹಕಾರ ಸಚಿವಾಲಯ ಸ್ಥಾಪನೆಯಾದ ನಂತರ ಸಹಕಾರ ಕ್ಷೇತ್ರದಲ್ಲಿ ಆರ್ಥಿಕ ಕ್ರಾಂತಿಕಾರಕ ಬದಲಾವಣೆಯಾಗಿದೆ

ಎಂದರು. ಕಳೆದ ೪ ವರ್ಷಗಳಲ್ಲಿ ಸಹಕಾರ ಆಂದೋಲನದಲ್ಲಿ ಪಾರದರ್ಶಕತೆ, ಆರ್ಥಿಕ ಪ್ರಗತಿ, ಜನಸ್ನೇಹಿ, ಯುವ ಸಹಭಾಗಿತ್ವ ಸೇರಿದಂತೆ ಹಲವು ಅಂಶಗಳಲ್ಲಿ ವ್ಯಾಪಕ ಅಭಿವೃದ್ಧಿಯಾಗಿದೆ. ದೇಶದ ಪ್ರಗತಿ ಹೊಸ ಗತಿಯತ್ತ ಸಾಗುತ್ತಿದೆ. ಸಣ್ಣ ರೈತರು, ವ್ಯಾಪಾರಿಗಳು, ಮಹಿಳೆಯರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತರಲಾಗಿದೆ. ಸಹಕಾರ ವಲಯ ಆತ್ಮನಿರ್ಭರ ಭಾರತವನ್ನು ನಿರ್ಮಾಣ ಮಾಡುವುದಷ್ಟೇ ಅಲ್ಲದೇ ಇಡೀ ವಿಶ್ವವನ್ನು ಸುಸ್ಥಿರ ಆರ್ಥಿಕ ಕೇಂದ್ರವನ್ನಾಗಿ ಪರಿವರ್ತಿಸುತ್ತಿದೆ ಎಂದು ತಿಳಿಸಿದರು.

<><*<><>*><>

ಅಮೆರಿಕದ ಟೆಕ್ಸಾಸ್ ರಾಜ್ಯದಲ್ಲಿ ಸಂಭವಿಸಿದ ಆಕಸ್ಮಿಕ ಪ್ರವಾಹದಲ್ಲಿ ಕನಿಷ್ಠ ೩೨ ಮಂದಿ ಮೃತಪಟ್ಟಿದ್ದು, ೨೭ ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ. ಮೃತರಲ್ಲಿ ೧೮ ವಯಸ್ಕರು ಹಾಗೂ ೧೪ ಮಕ್ಕಳು ಸೇರಿದ್ದಾರೆ ಎಂದು ಕರ್ ಕೌಂಟಿಯ ಶೆರಿಫ್ ಲ್ಯಾರಿ ಲೈಥಾ ತಿಳಿಸಿದ್ದಾರೆ. ಶುಕ್ರವಾರ ಬೆಳಿಗಿನ ಜಾವ ಕೇವಲ ೪೫ ನಿಮಿಷಗಳಲ್ಲಿ ನೀರಿನ ಮಟ್ಟ ೨೬ ಅಡಿಗಳಷ್ಟು ಏರಿ, ಮನೆಗಳು ಮತ್ತು ವಾಹನಗಳನ್ನು ಪ್ರವಾಹದಲ್ಲಿ ಕೊಚ್ಚಿಹೋಗಿವೆ. ಸಾನ್ ಅಂಟೋನಿಯೋ ಬಳಿಯ ಪ್ರದೇಶಗಳಲ್ಲಿ ಇನ್ನೂ ಭಾರಿ ಮಳೆಯು ಮುಂದುವರೆದಿದ್ದು, ತುರ್ತು ಎಚ್ಚರಿಕೆಗಳು ಜಾರಿಯಲ್ಲಿವೆ. ಗುಆಡಲೂಪೇ ನದಿಯ ಪರ್ವತ ಪ್ರದೇಶಗಳಲ್ಲಿ ನೂರಾರು ವರ್ಷಗಳ ಇತಿಹಾಸ ಹೊಂದಿದ ಯುವ ಶಿಬಿರಗಳು ಹಾಗೂ ಪ್ರವಾಸಿಗರ ತಾಣಗಳಿವೆ. ಜುಲೈ ೪ರ ಅಮೆರಿಕದ ಸ್ವಾತಂತ್ರ್ಯ ದಿನಾಚರಣೆಯ ಹಿನ್ನೆಲೆಯಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಿದ್ದು, ನಾಪತ್ತೆಯಾದವರ ಸಂಖ್ಯೆಯನ್ನು ಖಚಿತಪಡಿಸಿಕೊಳ್ಳುವುದು ಕಷ್ಟವಾಗಿದೆ. ಪ್ರವಾಹದ ಅಪಾಯದ ಬಗ್ಗೆ ಶಿಬಿರ ಹಾಗೂ ನಿವಾಸಿಗಳಿಗೆ ಮುನ್ನೆಚ್ಚರಿಕೆ ನೀಡಲಾಗಿತ್ತೇ ಎಂಬ ಬಗ್ಗೆ ಅಧಿಕಾರಿಗಳ ಮೇಲೆ ಪ್ರಶ್ನೆಗಳು ಎದ್ದಿವೆ. ಇದರ ನಡುವೆ, ಭಾರತ ಪ್ರಧಾನಿ ನರೇಂದ್ರ ಮೋದಿ, ಟೆಕ್ಸಾಸ್‌ನ ಭೀಕರ ಪ್ರವಾಹದಲ್ಲಿ ಮಕ್ಕಳ ಸಹಿತ ಹಲವು ಜನರು ಪ್ರಾಣ ಕಳೆದುಕೊಂಡ ಘಟನೆಗೆ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಜಾಲತಾಣದ ಮೂಲಕ ಪ್ರತಿಕ್ರಿಯಿಸಿದ ಪ್ರಧಾನಿ, ಅಮೆರಿಕ ಸರ್ಕಾರ ಹಾಗೂ ದುಃಖಿತ ಕುಟುಂಬಗಳಿಗೆ ತಮ್ಮ ಸಂತಾಪವನ್ನು ತಿಳಿಸಿದ್ದಾರೆ.

<><*<><>*><>

ವಿಶ್ವ ಬ್ಯಾಂಕ್ ಭಾರತಕ್ಕೆ ವಿಶ್ವದ ಅತ್ಯಂತ ಸಮಾನ ಸಮಾಜಗಳಲ್ಲಿ ಸ್ಥಾನ ನೀಡಿದೆ. ವಿಶ್ವ ಬ್ಯಾಂಕ್ ಪ್ರಕಾರ, ಭಾರತದ ಗಿನಿ ಸೂಚ್ಯಂಕ, ೨೫.೫ ರಷ್ಟಿದ್ದು, ಸ್ಲೋವಾಕ್ ಗಣರಾಜ್ಯ, ಸ್ಲೊವೇನಿಯಾ ಮತ್ತು ಬೆಲಾರಸ್ ನಂತರ ವಿಶ್ವದ ನಾಲ್ಕನೇ ಅತ್ಯಂತ ಸಮಾನ ರಾಷ್ಟ್ರವಾಗಿದೆ. ಗಿನಿ ಸೂಚ್ಯಂಕವು ಆ ದೇಶದಲ್ಲಿರುವ ಕುಟುಂಬಗಳ ಅಥವಾ ವೈಯಕ್ತಿಕ ಆದಾಯ, ಸಂಪತ್ತು ಅಥವಾ ಆದಾಯ ಬಳಕೆಯನ್ನು ಹೇಗೆ ಸಮಾನವಾಗಿ ವಿತರಿಸಲಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸರಳ ಆದರೆ ಶಕ್ತಿಯುತ ಮಾರ್ಗವಾಗಿದೆ. ಭಾರತವು, "ಸಾಧಾರಣ ಕಡಿಮೆ" ಅಸಮಾನತೆ ವರ್ಗಕ್ಕೆ

ಸೇರುತ್ತದೆ, ಇದರಲ್ಲಿ ೨೫ ಮತ್ತು ೩೦ ರ ನಡುವಿನ ಗಿನಿ ಅಂಕಗಳು ಸೇರಿವೆ. ಸ್ಲೋವಾಕ್ ಗಣರಾಜ್ಯದಂತಹ ದೇಶಗಳು ೨೪.೧ ಅಂಕಗಳೊಂದಿಗೆ, ಸ್ಲೊವೇನಿಯಾ ೨೪.೩ ಮತ್ತು ಬೆಲಾರಸ್ ೨೪.೪ ಅಂಕಗಳೊಂದಿಗೆ ಕಡಿಮೆ ಅಸಮಾನತೆ ಗುಂಪಿನಲ್ಲಿವೆ. ಈ ಗುಂಪಿಗೆ ಸೇರಲು ಭಾರತ ಸನಿಹದಲ್ಲಿದೆ. ಈ ಮೂರು ರಾಷ್ಟ್ರಗಳ  ಹೊರತಾಗಿ, ವಿಶ್ವ ಬ್ಯಾಂಕ್ ದತ್ತಾಂಶದ ಪ್ರಕಾರ, ಇತರ ೧೬೭ ದೇಶಗಳಿಗಿಂತ ಭಾರತವು ಉತ್ತಮ ಅಂಕವನ್ನು ಹೊಂದಿದೆ. ಭಾರತದ ಗಿನಿ ಸೂಚ್ಯಂಕವು ೨೦೧೧ ರಲ್ಲಿ ೨೮.೮ ರಷ್ಟಿತ್ತು ಮತ್ತು ೨೦೨೨ ರಲ್ಲಿ ೨೫.೫ ಕ್ಕೆ ತಲುಪಿತ್ತು. ಈ ಸ್ಥಿರ ಬದಲಾವಣೆಯು ಭಾರತವು ಆರ್ಥಿಕ ಬೆಳವಣಿಗೆಯನ್ನು ಸಾಮಾಜಿಕ ಸಮಾನತೆಯೊಂದಿಗೆ ಸಂಯೋಜಿಸುವಲ್ಲಿ ಸ್ಥಿರವಾದ ಪ್ರಗತಿಯನ್ನು ಸಾಧಿಸಿದೆ ಎಂದು ತೋರಿಸಿದೆ.

**<><*<><>*><>**

ದೇಶದಲ್ಲಿ ದ್ವಿಚಕ್ರ ವಾಹನ ಸವಾರರ ಸುರಕ್ಷತೆಗೆ ಮುಂದಾಗಿರುವ ಕೇಂದ್ರ ಸರ್ಕಾರ, ಕಳಪೆ ಗುಣಮಟ್ಟದ ಹೆಲ್ಮೆಟ್ ಮಾರಾಟ ಮತ್ತು ಬಳಕೆಗೆ ತಡೆ ನೀಡಿದೆ.  ಈ ಕುರಿತು ಪ್ರತಿಕ್ರಿಯಿಸಿರುವ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವ ಪ್ರಲ್ಹಾದ್ ಜೋಶಿ, ವಾಹನ ಸವಾರರಿಗೆ ಃIS ಪ್ರಮಾಣೀಕರಿಸಿದ ISI ಗುರುತುಳ್ಳ ಹೆಲ್ಮೆಟ್ ಕಡ್ಡಾಯ ಮಾಡಲಾಗಿದೆ. ಕಳಪೆ ಗುಣಮಟ್ಟದ ಹೆಲ್ಮೆಟ್ ತಯಾರಕರು ಮತ್ತು ಮಾರಾಟಗಾರರ ವಿರುದ್ಧ ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದ್ದಾರೆ.

**<><*<><>*><>**

ಲಂಡನ್‌ನಲ್ಲಿ ನಡೆಯುತ್ತಿರುವ ವಿಂಬಲ್ಡನ್-೨೦೨೫ ಗ್ರ್ಯಾನ್ ಸ್ಲ್ಯಾಮ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತ ಯುಕಿ ಭಾಂಬ್ರಿ ಮತ್ತು ಅಮೆರಿಕದ ರಾಬರ್ಟ್ ಗೆಲೊವೆ ಜೋಡಿ, ಪೋರ್ಚಗಲ್‌ನ ನುನೊ ಬಾರ್ಗೆಸ್ ಮತ್ತು ಅಮೆರಿಕದ ಮಾರ್ಕೋಸ್ ಜಿರಾನ್ ಜೊಡಿಯ ವಿರುದ್ಧ ಗೆಲುವು ಸಾಧಿಸಿ, ಮೂರನೇ ಸುತ್ತಿಗೆ ಪ್ರವೇಶ ಪಡೆದಿದ್ದಾರೆ.

**<><*<><>*><>**

ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ತಮ್ಮ ಅಪರೂಪದ ಫಾರ್ಮ್ ಮುಂದುವರಿಸಿಕೊಂಡು, ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ನಿನ್ನೆ ಸಂಜೆ ನಡೆದ 'ನೀರಜ್ ಚೋಪ್ರಾ ಕ್ಲಾಸಿಕ್ ೨೦೨೫' ಪ್ರಥಮ ಆವೃತ್ತಿಯ ವಿಶ್ವ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ವಿಜಯಶಾಲಿಯಾಗಿ ಹೊರಹೊಮ್ಮಿದರು. ಅವರು ತಮ್ಮ ಮೂರನೇ ಪ್ರಯತ್ನದಲ್ಲಿ ೮೬.೧೮ ಮೀಟರ್ ದೂರ ಎಸೆದು ಸ್ವರ್ಣ ಪದಕ ತಮ್ಮದಾಗಿಸಿಕೊಂಡರು. ಕೀನ್ಯಾದ ಜೂಲಿಯಸ್ ಯೆಗೋ ೮೪.೫೧ ಮೀಟರ್‌ನ

ಎಸೆತದೊಂದಿಗೆ ದ್ವಿತೀಯ ಸ್ಥಾನ ಪಡೆದುಕೊಂಡರೆ, ಶ್ರೀಲಂಕಾದ ರುಮೇಶ್ ಪತಿರಾಜೆ ೮೪.೩೪ ಮೀಟರ್ ಎಸೆತದೊಂದಿಗೆ ತೃತೀಯ ಸ್ಥಾನ ಪಡೆದುಕೊಂಡರು.

<><*<><>*><>

ಬರ್ಮಿಂಗ್‌ಹ್ಯಾಮ್‌ನ ಎಡ್ಜ್‌ಬ್ಯಾಸ್ಟನ್‌ನಲ್ಲಿ ನಡೆಯುತ್ತಿರುವ ಭಾರತ - ಇಂಗ್ಲೆಂಡ್ ನಡುವಿನ ಆಂಡರ್‌ಸನ್ - ತೆಂಡೂಲ್ಕರ್ ಟ್ರೋಫಿಯ ಎರಡನೇ ಟೆಸ್ಟ್ ಪಂದ್ಯದ ಕೊನೆಯ ದಿನವಾದ ಇಂದು, ದಿನದಾಟ ಭಾರತೀಯ ಕಾಲಮಾನ ಅಪರಾಹ್ನ ೩.೩೦ಕ್ಕೆ ಆರಂಭವಾಗಲಿದ್ದು, ಇಂಗ್ಲೆಂಡ್ ತನ್ನ ಎರಡನೇ ಇನ್ನಿಂಗ್ಸ್‌ಅನ್ನು ಮುಂದುವರಿಸಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>